UASB LIBRARY
Newspaper Clippings
Pg .1 Wednesday 14-07-2021 Jai Kisan



ಅಪರೂಪದ ಪೇಟೆಂಟ್ ಪಡೆದ ಕೃಷಿಕ ರಮಾಕಾಂತ ಹೆಗಡೆ

ರಾಜ್ಯದ ಸಿಗಂದಿನಿ ಕಾಳುಮೆಣಸಿಗೆ ಪೇಟೆಂಟ್

■ **ವಿಕ ಸುದ್ದಿಲೋಕ** ಸಿದ್ದಾಪುರ (ಉತ್ತರ ಕನ್ನಡ)

ರಾಜ್ಯದ ಕಾಳುಮೆಣಸಿನ ತಳಿಯೊಂದಕ್ಕೆ ಮೊದಲ ಬಾರಿಗೆ ಪೇಟೆಂಟ್‌ನ ಮಾನ್ಯತೆ ಸಿಕ್ಕಿದೆ!

ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಹಸರಗೋಡು ಗ್ರಾಪಂ ವ್ಯಾಪ್ತಿಯ ಹುಣಸೆಕೊಪ್ಪದ ಕೃಷಿಕ ರಮಾಕಾಂತ ಹೆಗಡೆ ಬೆಳೆದಿರುವ ಕಾಳುಮೆಣಸಿಗೆ ಕೇಂದ್ರ ಸರಕಾರದ ಪೇಟೆಂಟ್ ಲಭ್ಯವಾಗಿದ್ದು, ಈ ತಳಿಗೆ 'ಸಿಗಂದಿನಿ' ಎಂದು ನಾಮಕರಣ ಮಾಡಲಾಗಿದೆ.

ಇದುವರೆಗೆ ಕಾಳುಮೆಣಸಿನ 3 ತಳಿಗೆ ಮಾತ್ರ ಪೇಟೆಂಟ್ ಲಭಿಸಿದ್ದು, ಅದರಲ್ಲಿ 2 ಕೇರಳದ ಪಾಲಾಗಿದೆ. ಪೇಟೆಂಟ್ ಪಡೆದ ಕರ್ನಾಟಕದ ಏಕೈಕ ತಳಿ ಸಿಗಂದಿನಿಯಾಗಿದೆ. ಉತ್ತರಕನ್ನಡ ಜಿಲ್ಲೆ 15ನೇ ಶತಮಾನದಲ್ಲಿ ಜಗತ್ತಿಗೆ ಕಾಳು ಮೆಣಸನ್ನು ಪರಿಚಯಿಸಿದ ಖ್ಯಾತಿ ಹೊಂದಿದೆ. ಜಿಲ್ಲೆಯಲ್ಲಿ ಕರಿಮೆಣಸಿನ ಹಲವಾರು ತಳಿಗಳು ಇವೆ. ಹೀಗಿದ್ದರೂ, ಅವುಗಳಿಗೆ ಪೇಟೆಂಟ್ ಮಾನ್ಯತೆ ಲಭಿಸಿದ್ದು ಇದೇ ಮೊದಲು. ತೋಟಗಾರಿಕೆ ಇಲಾಖಾ ಅಧಿಕಾರಿಗಳ ನೆರವಿನೊಂದಿಗೆ ಪೇಟೆಂಟ್ ಗಳಿಸುವ ನಿಟ್ಟಿನಲ್ಲಿ ಶ್ರಮಿಸಿ ಗಮನ ಸೆಳೆದಿದ್ದಾರೆ ಕೃಷಿಕರಾದ ರಮಾಕಾಂತ ಹೆಗಡೆ.

ಸಾಂಪ್ರಾದಾಯಿಕ ಅಡಕೆ ತೋಟದಲ್ಲಿ ಬೆಳೆದ ಈ ಕಾಳುಮೆಣಸಿನ ತಳಿ ರಮಾಕಾಂತರ ಅಜ್ಜನ ಕಾಲದಿಂದಲೂ ಇತ್ತಾದರೂ ವೆನಿಲಾ ಅಬ್ಬರದ ಕಾಲದಲ್ಲಿ ಮೂಲೆಗುಂಪಾಗಿತ್ತು. ನಂತರ ವೆನಿಲಾ ತೆರವುಗೊಳಿಸಿದಾಗ ಯಾವುದೇ ರೋಗ ರುಜಿನವಿಲ್ಲದೆ ಹಸಿರಾಗಿರುವ ಕಾಳುಮೆಣಸಿನ ಬಳ್ಳಿಯನ್ನು ಕಂಡು ಆಸಕ್ತಿ ಹೊಂದಿ ಅದನ್ನು ಅಭಿವೃದ್ಧಿಪಡಿಸಿದರು. ಈ ಸಂದರ್ಭದಲ್ಲಿ ತೋಟಕ್ಕೆ ಭೇಟಿ ನೀಡಿದ ತೋಟಗಾರಿಕಾ ಇಲಾಖೆಯ ಅಧಿಕಾರಿಗಳು, ಇದು ಅಪರೂಪದ ತಳಿ ಎಂದು ಗುರುತಿಸಿ ಪೇಟೆಂಟ್ ಪಡೆಯಲು ಸಹಕಾರ ನೀಡಿದರು.



ಸಿದ್ದಾಪುರ ಹುಣಸೆಕೊಪ್ಪದ ರಮಾಕಾಂತ ಹೆಗಡೆಯವರ ಸಿಗಂದಿನಿ ಕಾಳುಮೆಣಸಿನ ತಳಿಯ ನರ್ಸರಿ.

ತೋಟಗಾರಿಕೆ ಇಲಾಖೆ ಬೆಂಬಲ

ಸಿಗಂದಿನಿ ಕಾಳುಮೆಣಸಿನ ತಳಿಗೆ ಪೇಟೆಂಟ್ ಪಡೆದ ರಮಾಕಾಂತ ಹೆಗಡೆಯವರನ್ನು ಹುಣಸೆಕೊಪ್ಪದಲ್ಲಿ ತೋಟಗಾರಿಕಾ ಅಧಿಕಾರಿಗಳು ಸನ್ಮಾನಿಸಿದರು. ಈ ಸಂದರ್ಭದಲ್ಲಿ ತೋಟಗಾರಿಕಾ ಇಲಾಖೆ ಉಪನಿರ್ದೇಶಕ ಅರುಣ ಎಚ್.ಜಿ., ದಾದಾ ಸಾಬ್, ತೋಟಗಾರಿಕಾ ಕಾಲೇಜ್‌ನ ಸುಧೀರ ಕುಲಕರ್ಣಿ, ಬಾಲಚಂದ್ರ ಸಾಯಿಮನೆ ಮುಂತಾದವರು ಉಪಸ್ಥಿತರಿದ್ದರು.

ತಾಲೂಕಿನಲ್ಲಿ 1900 ಹೆಕ್ಟೇರ್ ಪ್ರದೇಶದಲ್ಲಿ ಕಾಳುಮೆಣಸು ಬೆಳೆಯಲಾಗುತ್ತಿದೆ. 28 ವಿಧದ ಕಾಳುಮೆಣಸಿನ ತಳಿಗಳು ಇಲ್ಲಿವೆ. ಸಿಗಂದಿನಿ ತಳಿ ಅತ್ಯುತ್ತಮ ಗುಣಮಟ್ಟ ಹೊಂದಿದೆ. ಇದಕ್ಕೆ ಸಿಕ್ಕಿರುವ ಪೇಟೆಂಟ್ ಉಳಿದ ತಳಿಗೂ ಸಿಗುವಂತೆ ಪ್ರಯತ್ನಿಸಬೇಕಿದೆ. ಶಿರಸಿ, ಸಿದ್ದಾಪುರ, ಯಲ್ಲಾಪುರ ಕಾಳಮೆಣಸಿನ ಮೂಲಕೇಂದ್ರ ಎಂದು ಗುರುತಿಸಬೇಕಾಗಿದೆ. ಇಲ್ಲಿಯ ಕಾಳುಮೆಣಸು ಗುಣಮಟ್ಟದಲ್ಲಿ ಅತ್ತುತ್ತಮವಾಗಿರುತ್ತದೆ.

-ಮಹಾಬಲೇಶ್ವರ ತೋಟಗಾರಿಕಾ ಅಧಿಕಾರಿ, ಸಿದ್ದಾಪುರ

ಸಿಗಂದಿನಿಯ ವೈಶಿಷ್ಟ್ಯ ಹಲವು

ಸಿಗಂದಿನಿ ಕಾಳುಮೆಣಸಿನ ಬಳ್ಳಿಗೆ ರೋಗದ ಪ್ರಮಾಣ ಕಡಿಮೆ. ಬುಡದಲ್ಲಿ ಹರಡುವ ಕವಲು ಬಳ್ಳಿಗೆ ರೋಗ ಬಂದರೂ ತಾಯಿ ಬಳ್ಳಿಗೆ ರೋಗ ಬರುವುದಿಲ್ಲ. ನಾಟಿ ಮಾಡಿದ ಎರಡು ವರ್ಷದಲ್ಲೆ ಬೆಳೆ ಬಿಡಲು ಪ್ರಾರಂಭವಾಗುತ್ತದೆ. ಕಾಳುಗಳು ಒಂದೇ ಅಳತೆಯದ್ದಾಗಿದ್ದು, ತೂಕದ ಪ್ರಮಾಣವೂ ಹೆಚ್ಚು. ಜುಲೈ-ಆಗಸ್ಟ್‌ನಲ್ಲೆ ಹೂವು ಬಿಡುವ ಪ್ರಕ್ರಿಯೆ ಪ್ರಾರಂಭವಾಗಿ ಜನವರಿ-ಫೆಬ್ರವರಿಯಲ್ಲಿ ಕೊಯ್ಲು ಮುಗಿದಿರುತ್ತದೆ. ಇದರಿಂದ ಬಳ್ಳಿಗೆ ಬೆಳೆಯಲು ಅನುಕೂಲವಾಗುತ್ತದೆ. ಸಾವಯವ ಗೊಬ್ಬರದಲ್ಲೆ ಬೆಳೆಯಬಹುದು. ಬೇರೆ ಯಾವುದೇ ರಾಸಾಯನಿಕ ನೀಡಬೇಕಾಗಿಲ್ಲ. ಔಷಧಿಯ ಗುಣವಂತೂ ಉಳಿದೆಲ್ಲ ತಳಿಗಿಂತ ಹೆಚ್ಚಾಗಿದೆ ಎಂದು ರಮಾಕಾಂತ ಹೆಗಡೆ ಮಾಹಿತಿ ನೀಡಿದರು.

14-07-2021 Vk Pg 07

For more information visit
University Library Website
Web - uasbagrilibindia.org
E-mail- librarian@uasbangalore.edu.in

40 ಡಿಗ್ರಿ ಉಷ್ಣಾಂಶವುಳ್ಳ ಕಲಬುರಗಿ | ಕಾಶ್ಮೀರದ ಹೊರಗೂ ರೈತನಿಂದ ವಿಶೇಷ ಪ್ರಯತ್ನ

ಬಿಸಿಲನಾಡಿನಲ್ಲೂ ಕಾಶ್ಮೀರದ ಸೇಬು!

◆ ಅರುಣಕುಮಾರ ಬಿ. ಹೂಗಾರ



ದಿಗಂತ ವಿಶೇಷ

ಆಸಕ್ತಿ ವಹಿಸಿ ದುಡಿದರೆ ಯಾವ ಬೆಳೆಯಿಂದಲಾದರೂ ಫಲ ಪಡೆಯಬಹುದು. ನಮ್ಮ ರೈತರು ಸಾಂಪ್ರದಾಯಿಕ ಬೆಳೆಯೊಂದಿಗೆ ಸರಿಯಾದ ಮಾಹಿತಿ ಪಡೆದು ಇತರೆ ಬೆಳೆ ಬೆಳೆಯಲು ಮುಂದಾದರೆ ಆರ್ಥಿಕ ಸಂಕಷ್ಟದಿಂದ ಪಾರಾಗಬಹುದು.
■ ಶಾಂತಕುಮಾರ ಜಿ. ಸೋನಾರ, ಪ್ರಗತಿಪರ ರೈತ , ಅತನೂರ

ಅಫಜಲಪುರ: ಕಾಶ್ಮೀರಕ್ಕೆ ಸೀಮಿತವಾದ ಸೇಬನ್ನು ಈಗ ಕಲಬುರಗಿಯ ಬಿಸಿಲಿನ ತಾಪದಲ್ಲೂ ಬೆಳೆಯಬಹುದು ಎಂದು ಇಲ್ಲಿನ ಪ್ರಗತಿಪರ ರೈತ ಅತನೂರ ಗ್ರಾಮದ ಶಾಂತಕುಮಾರ ಜಿ. ಸೋನಾರ ಅವರು ಮುಂದಾಗಿದ್ದಾರೆ.

ಬಹುತೇಕವಾಗಿ ಕಾಶ್ಮೀರದಂತ ತಂಪು ವಾತಾವರಣದಲ್ಲಿ ಬೆಳೆಯುವ ಬೆಳೆಯಾಗಿದೆ. ಆದರೆ, ಬಿಸಿಲಿನ ತಾಪ ಇರುವ ಕಲಬುರಗಿಯಲ್ಲಿ ಸೇಬು ಬೆಳೆಯಲು ರೈತ ಮುಂದಾಗಿರುವುದು ಇತರರಲ್ಲೂ ಆರ್ಥಿಕ ಲಾಭ ಕಾಣಬಹುದೇ ಎಂಬ ಆಲೋಚನೆ ಮೂಡಿದೆ.

ಕಲಬುರಗಿಯಲ್ಲಿ 40 ಡಿಗ್ರಿ ಉಷ್ಣಾಂಶ: ಮೈನಸ್ ಉಷ್ಣಾಂಶವಿರುವ ಕಾಶ್ಮೀರವೆಲ್ಲಿ, 40 ಡಿಗ್ರಿ ದಾಟುವ ಕಲಬುರಗಿಯೆಲ್ಲಿದೆ. ಆದರೆ, ಸೇಬು ಬೆಳೆಯನ್ನು ಬೆಳೆಯುವ ಮೂಲಕ ಫಸಲು ಪಡೆದೇ ತೀರುತ್ತೇನೆ ಎಂದು ಪ್ರಗತಿಪರ ರೈತ ಅತನೂರ ಗ್ರಾಮದ ಶಾಂತಕುಮಾರ ಜಿ. ಸೋನಾರ ಅವರು, ಕೃಷಿ ಕ್ಷೇತ್ರದಲ್ಲಿ ಏನನ್ನಾದರು ಸಾಧಿಸಬೇಕೆಂದು ಯೋಚಿಸಿ ನಿರ್ಧಾರ ಕೈಗೊಂಡಿದ್ದಾನೆ. ಪ್ರಗತಿಪರ ರೈತ ಅತನೂರ ಗ್ರಾಮದ ಶಾಂತಕುಮಾರ ಜಿ. ಸೋನಾರ ಅವರು, ಬಿಡುವಿನ ವೇಳೆಯಲ್ಲಿ ಬಂಜರು ಭೂಮಿಯಾಗಿದ್ದ 17 ಎಕರೆ ಜಾಗವನ್ನು ಸಮತಟ್ಟು ಮಾಡಿ ಹಸಿರು ತೋಟವನ್ನಾಗಿ ಮಾಡಿ ಸೈ ಎನಿಸಿಕೊಂಡವರು.

ಸಾವಯವ ಕೃಷಿ ಪದ್ಧತಿ: ಸಾವಯವ ಕೃಷಿ ಪದ್ಧತಿಗೆ ಹೆಚ್ಚಿನ ಒತ್ತು ನೀಡಿರುವ ಸೋನಾರ ಹನಿ ನೀರಾವರಿ ಪದ್ಧತಿ, ಬೋರ್‌ವೆಲ್, ಕೃಷಿ ಹೊಂಡವನ್ನು ಮಾಡಿಕೊಂಡಿದ್ದಾರೆ. ಅಂತರ್ಜಲ ವೃದ್ಧಿಗೆ ಮಳೆ ನೀರನ್ನು ಸಂಗ್ರಹಿಸಿಡಲು ಇಂಗುಗುಂಡಿ ನಿರ್ಮಿಸಿದ್ದಾರೆ. ಕಳೆಕಸವನ್ನು ಸಂಗ್ರಹಿಸಿ ಗೊಬ್ಬರ ತಯಾರಿಸಿ ಬಳಕೆ ಮಾಡುತ್ತಿದ್ದಾರೆ.

ಒಂದು ಎಕರೆ ಪ್ರದೇಶದಲ್ಲಿ ಬೆಳೆ: ಸಾಂಪ್ರದಾಯಿಕ ಬೆಳೆಗಳೊಂದಿಗೆ ವಾಣಿಜ್ಯ ಹಾಗೂ ಹಲವು ಬಗೆಯ ಹಣ್ಣುಗಳನ್ನು ಬೆಳೆಯಲು ಮುಂದಾಗಿ ರುವ ಇವರು ಪ್ರಸ್ತುತ ನಾಟಿ ಮಾಡಿದ 18ತಿಂಗಳ ಒಳಗಾಗಿ ಹಣ್ಣು ಬರುವ 170 ಸೇಬು ಹಣ್ಣಿನ ಸಸಿಗಳನ್ನು ಸುಮಾರು ಒಂದು ಎಕರೆ ಪ್ರದೇಶದಲ್ಲಿ ನೆಟ್ಟಿದ್ದಾರೆ. ಈ ಗಿಡಗಳು ಸಮೃದ್ಧವಾಗಿ ಬೆಳೆಯುತ್ತಿವೆ.

ಯೂಟ್ಯೂಬ್ ಮೂಲಕ ಮಾಹಿತಿ ಸಂಗ್ರಹ: ಯೂಟ್ಯೂಬ್‌ನಲ್ಲಿ ಸೇಬು ಕೃಷಿ ಬಗ್ಗೆ ಮಾಹಿತಿ ಸಂಗ್ರಹಿಸಿ ಅದರಲ್ಲಿದ್ದ ಫೋನ್ ನಂಬರ್ ಸಂಪರ್ಕಿಸಿ ಮಾಹಿತಿ ಪಡೆದುಕೊಂಡು ಈ ಕೃಷಿಗಿಳಿದಿದ್ದಾರೆ. ತೊಗರಿ ಬೆಳೆಯುವ ಮಣ್ಣಿನಲ್ಲಿ ಸೇಬು ಬೆಳೆಯಬಹುದು ಎಂಬ ಭರವಸೆ ಸಿಕ್ಕಿದ ಬಳಿಕ ತುಮಕೂರಿನ ಸಿರಾ ತಾಲೂಕಿನ ಪ್ರಗತಿಪರ ರೈತರೊಬ್ಬರಿಂದ ಸೇಬಿನ ಗಿಡಗಳನ್ನು ತರಿಸಿಕೊಂಡು ನಾಟಿ ಮಾಡಿದ್ದಾರೆ. ಒಂದೂವರೆ ವರ್ಷದಲ್ಲೇ ಈ ಸೇಬು ಗಿಡ ಫಲ ಬಿಡುತ್ತದೆಯಂತೆ.

ಈ ರೈತನಿಗೆ ಪ್ರೋತ್ಸಾಹ ಅಗತ್ಯ

ರೈತರಿಗೆ ಹಲವು ಬಗೆಯ ಬೆಳೆಗಳನ್ನು ಬೆಳೆಯುವ ಪದ್ಧತಿ ಮತ್ತು ವಿಧಾನಗಳನ್ನು ತಿಳಿಸಿಕೊಡುತ್ತಾ ಸಾಮಾಜಿಕ ಸೇವೆಯನ್ನು ನಡೆಸುತ್ತಿದ್ದಾರೆ. ಇಂತಹ ಪ್ರಗತಿಪರ ರೈತರನ್ನು ಸರ್ಕಾರ ಮತ್ತು ತೋಟಗಾರಿಕೆ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಗುರುತಿಸಿ ಪ್ರೋತ್ಸಾಹಿಸಬೇಕು.

ಸೇಬಿನ ಜತೆ ವಿವಿಧ ಫಸಲು

ಒಂದು ಎಕರೆ ಪ್ರದೇಶದಲ್ಲಿ 180 ಬೀಜ ರಹಿತ ನಿಂಬೆ ಹಣ್ಣಿನ ಗಿಡ, 200 ಪೇರಲ ಗಿಡ, 100 ಸೀತಾಫಲ, ಹೆಬ್ಬೇವು, ತೆಂಗಿನ ಮರ, ಮಾವಿನ ಮರ, ಸಪೋಟ, ಕಬ್ಬು, ತೊಗರಿ, ದಾಳಿಂಬೆ, ಕಿತ್ತಳೆ, ಯಾಲಕ್ಕಿ, ಗೋಡಂಬಿ, ಹಸಿ ಶುಂಠಿ, ಸಾಗುವಾನಿ, ನುಗ್ಗೆ, ಜವಾರಿ ಬಾಳೆ ಹಣ್ಣು, ಅಂಜೂರ, ನೇರಳೆ ಹೀಗೆ ಹಲವು ಬಗೆಯ ಗಿಡವನ್ನು ಬೆಳೆದಿದ್ದಾರೆ.

UASB LIBRARY
Newspaper Clippings
Pg .3 Jai Kisan Wednesday 14-07-2021

ಮಾವು, ಬಾಳೆ, ನಿಂಬೆ, ಸಪೋಟಾ, ಪೇರಲ ಹೊರಗಿಟ್ಟ ಸರಕಾರ

ಹಣ್ಣು ಬೆಳೆಗಾರರಿಗೆ ಪರಿಹಾರ ತಾರತಮ್ಯ

■ **ರಾಜು ನದಾಫ** ಹಾವೇರಿ
rajesab.nadaf@timesgroup.com

ಸರಕಾರವು ಕೋವಿಡ್ ಪ್ಯಾಕೇಜ್ ಮೂಲಕ ಹಣ್ಣು ಬೆಳೆಗಾರರ ನೆರವಿಗೆ ಧಾವಿಸಿರುವುದಕ್ಕೆ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ. ಆದರೆ ಇದರ ಬೆನ್ನಲ್ಲೇ ಕೇವಲ ಏಳು ಹಣ್ಣಿನ ತಳಿಗಳಿಗೆ ಮಾತ್ರ ಪರಿಹಾರ ನೀಡುವ ಮೂಲಕ ಪ್ರಮುಖ ಬೆಳೆಗಾರರಿಗೆ ತಾರತಮ್ಯ ಧೋರಣೆ ಅನುಸರಿಸಿರುವುದು ಅಸಮಾಧಾನಕ್ಕೆ ಕಾರಣವಾಗಿದೆ.

ಪ್ಯಾಕೇಜ್ ಘೋಷಣೆ ಸಂದರ್ಭದಲ್ಲಿ ಸರಕಾರವು ರಾಜ್ಯದ ಹೂವು, ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ ತಲಾ 10 ಸಾವಿರ ರೂ. ಪರಿಹಾರ ನೀಡುವುದಾಗಿ ಹೇಳಿ ಸುತ್ತೋಲೆ ಹೊರಡಿಸಿತ್ತು. ಇನ್ನೇನು ರೈತರ ಬ್ಯಾಂಕ್ ಖಾತೆಗೆ ಹಣ ಜಮೆಯಾಗಬೇಕು ಎನ್ನುವಷ್ಟರಲ್ಲೇ ತೋಟಗಾರಿಕೆ ಇಲಾಖೆ ನಿರ್ದೇಶಕರು ಹೊಸ ಸೂಚನೆ ನೀಡಿದ್ದಾರೆ.

ಪೇರಲ, ಬಾಳೆ, ಮಾವು, ಸಪೋಟಾ ಮತ್ತು ನಿಂಬೆ ಹೊರತುಪಡಿಸಿ ಉಳಿದ ಹಣ್ಣಿನ ಬೆಳೆಗಳಿಗೆ ಮಾತ್ರ ಪರಿಹಾರ ಪರಿಗಣಿಸುವಂತೆ ಸೂಚಿಸಿದ್ದಾರೆ.

ಸರಕಾರ ಪ್ಯಾಕೇಜ್ ಘೋಷಣೆಗೂ ಮುನ್ನ ಎಲ್ಲ ಜಿಲ್ಲೆಗಳ ತೋಟಗಾರಿಕೆ ಇಲಾಖೆ ಮೂಲಕ ಹಣ್ಣು ಬೆಳೆಗಾರರ ಸಮಗ್ರ ಮಾಹಿತಿ ಕಲೆ ಹಾಕಿತ್ತು. ಇದರನ್ವಯ ಜಿಲ್ಲೆಯ ಹಣ್ಣು ಬೆಳೆಗಾರರಿಗೆ 8 ಕೋಟಿ ರೂ. ಪರಿಹಾರ ಬರಬೇಕಿತ್ತು. ಆದರೆ ನಿರ್ದೇಶಕರ ಸೂಚನೆ ಪ್ರಕಾರ, ಜಿಲ್ಲೆಯ ಹಣ್ಣು ಬೆಳೆಗಾರರಿಗೆ ಬಂದದ್ದು ಕೇವಲ 2.84 ಕೋಟಿ ರೂ. ಪರಿಹಾರ ಮಾತ್ರ.

ಜಿಲ್ಲೆಯ 11 ಸಾವಿರ ಹಣ್ಣು ಬೆಳೆಗಾರರ ಪೈಕಿ ಕೇವಲ 5,500 ಬೆಳೆಗಾರರಿಗೆ ಮಾತ್ರ ಪರಿಹಾರ ದೊರಕಿದೆ. ಇನ್ನುಳಿದ ಬೆಳೆಗಾರರ ಗತಿ ಏನು? ಜಿಲ್ಲೆಯವರೇ ಆದ ತೋಟಗಾರಿಕೆ ಸಚಿವ ಆರ್.ಶಂಕರ ಈ ನಿಟ್ಟಿನಲ್ಲಿ ರೈತರನ್ನು ಮರೆತಿದ್ದೇಕೆ? ಎನ್ನುವ ಅಸಮಾಧಾನ ಪರಿಹಾರ ವಂಚಿತ ಬೆಳೆಗಾರರಿಂದ ವ್ಯಕ್ತವಾಗಿದೆ.

ಪರಿಹಾರ ವಂಚಿತ ಬೆಳೆಗಾರರಿಗೆ ನ್ಯಾಯ ಒದಗಿಸುವ ಕುರಿತು ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಲಾಗುವುದು. ಎಲ್ಲ ಬೆಳೆಗಾರರಿಗೆ ಪರಿಹಾರ ನೀಡಲು 300 ಕೋಟಿ ರೂ.ಬೇಕಿತ್ತು. ಈಗ 84 ಕೋಟಿ ರೂ. ಪರಿಹಾರ ವಿತರಿಸಲಾಗಿದೆ.

-ಆರ್.ಶಂಕರ್ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಸಚಿವ


ಸರಕಾರ ಕೋವಿಡ್ ಪರಿಹಾರ ಪ್ಯಾಕೇಜ್ ಘೋಷಿಸಿದಂತೆ ಎಲ್ಲ ಹಣ್ಣು ಬೆಳೆಗಾರರಿಗೂ ಹಣ ನೀಡಬೇಕು. ನಾವು ಬೆಳೆದ ಹಣ್ಣುಗಳು ಮಾರಾಟವಾಗದೇ ಆರ್ಥಿಕ ನಷ್ಟ ಅನುಭವಿಸಿದ್ದೇವೆ.

-ಸಂತೋಷ ಕಟಗಿ
ಮಾವು ಬೆಳೆಗಾರ, ಶಿಗ್ಗಾವಿ

14-07-2021 Vk Pg 09

ಜೂನ್‌ನಲ್ಲಿ ತಾಳೆ ಎಣ್ಣೆ ಆಮದು ಶೇ 24ರಷ್ಟು ಇಳಿಕೆ

ನವದೆಹಲಿ (ಪಿಟಿಐ): ತಾಳೆ ಎಣ್ಣೆ ಆಮದು ಮೇ ತಿಂಗಳಿಗೆ ಹೋಲಿಸಿದರೆ ಜೂನ್‌ನಲ್ಲಿ ಶೇಕಡ 24ರಷ್ಟು ಇಳಿಕೆ ಆಗಿದ್ದು 5.87 ಲಕ್ಷ ಟನ್‌ಗಳಷ್ಟಾಗಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ (ಎಸ್‌ಇಎ) ತಿಳಿಸಿದೆ.



ದೇಶಿ ಮಾರುಕಟ್ಟೆಯಲ್ಲಿ ತಾಳೆ ಎಣ್ಣೆಯ ದಾಸ್ತಾನು ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಆಮದು ಕಡಿಮೆ ಆಗಿದೆ ಎಂದು ಅದು ಹೇಳಿದೆ. ಮೇ ತಿಂಗಳಿನಲ್ಲಿ ಭಾರತವು 7.69 ಲಕ್ಷ ಟನ್‌ಗಳಷ್ಟು ತಾಳೆ ಎಣ್ಣೆ ಆಮದು ಮಾಡಿಕೊಂಡಿತ್ತು.

ಕಚ್ಚಾ ತಾಳೆ ಎಣ್ಣೆ ಮತ್ತು ಇತರೆ ತಾಳೆ ಎಣ್ಣೆಗಳ ಮೇಲಿನ ಆಮದು ಸುಂಕವನ್ನು ಸೆಪ್ಟೆಂಬರ್‌ವರೆಗೆ ತಗ್ಗಿಸಿರುವುದು ಹಾಗೂ ಡಿಸೆಂಬರ್‌ವರೆಗೆ ಯಾವುದೇ ನಿರ್ಬಂಧ ಇಲ್ಲದೇ ಆರ್‌ಬಿಡಿ ತಾಳೆ ಎಣ್ಣೆ ಆಮದಿಗೆ ಅವಕಾಶ ನೀಡಿರುವುದು ದೇಶಿ ಸಂಸ್ಕರಣಗಾರರು ಮತ್ತು ಎಣ್ಣೆ-ಕಾಳುಗಳಗಳನ್ನು ಬೆಳೆಯುವವರ ಹಿತಾಸಕ್ತಿಗೆ ಹಾನಿ ಉಂಟುಮಾಡಲಿದೆ ಎನ್ನುವ ಆತಂಕವನ್ನು ಅದು ವ್ಯಕ್ತಪಡಿಸಿದೆ.

ಕಚ್ಚಾ ತಾಳೆ ಎಣ್ಣೆ ಆಮದು 5.76 ಲಕ್ಷ ಟನ್‌ಗಳಷ್ಟಾಗಿದೆ. ಹಿಂದಿನ ವರ್ಷದ ಜೂನ್‌ನಲ್ಲಿ 5.63 ಲಕ್ಷ ಟನ್‌ಗಳಷ್ಟಿತ್ತು. ಸೋಯಾಬಿನ್ ಎಣ್ಣೆ ಆಮದು 3,31,171 ಟನ್‌ಗಳಿಂದ 2,06,262 ಟನ್‌ಗಳಿಗೆ ಇಳಿಕೆ ಆಗಿದೆ. ಸೂರ್ಯಕಾಂತಿ ಎಣ್ಣೆ ಆಮದು 2,69,428 ಟನ್‌ಗಳಿಂದ 1,75,702 ಟನ್‌ಗಳಿಗೆ ಇಳಿಕೆ ಕಂಡಿದೆ. ಭಾರತವು ಇಂಡೊನೇಷ್ಯಾ ಮತ್ತು ಮಲೇಷ್ಯಾದಿಂದ ತಾಳೆ ಎಣ್ಣೆ ಆಮದು ಮಾಡಿಕೊಳ್ಳುತ್ತಿದೆ.

14-07-2021 Pv Pg 11